ಮನೋಹರವಾಗಿತ್ತು. ಕಣ್ಣುಗಳು ಅರಳಿ ನಿಂತಿದ್ದವು. ತುಟಿಗಳನ್ನು ಅದುರಿಸುತ್ತಾ ಅವಳು ಕೇಳಿದಳು,

'ಯಾರು ನೀವು?'

'ನಾನು ಇಲ್ಲಿ ಕಲಿಸಲು ಬರುವ ಸಂಸ್ಕೃತ ಮುನ್ಷಿಯ ಮಗ. ಅಪ್ಪನಿಗೆ ಸ್ವಲ್ಪವೂ ಹುಷಾರಿಲ್ಲ. ಆದ್ದರಿಂದ ಇವತ್ತು ಬರಲು ಸಾಧ್ಯವಿಲ್ಲವೆಂದು ಹೇಳಲು ನನ್ನನ್ನು ಕಳುಹಿಸಿದ್ದಾರೆ.'

ಅನಂತರ ಒಂದೆರಡು ನಿಮಿಷ ಅವರಿಬ್ಬರು ಮೌನವಾಗಿ ಕುಳಿತರು. ಮತ್ತೂ 'ನೋಡು' ಎಂದು ಹೃದಯಗಳು ಪಿಸುಗುಟ್ಟಿದರೂ ಯಾವುದೋ ಅನವಶ್ಯಕ ನಾಚಿಕೆ ಅವರ ಕಣ್ಣುಗಳನ್ನು ಕೆಳ ಹಾಕಿಸಿತ್ತು. ಕೊನೆಗೆ ಅವನು ಹೇಳಿದ,

'ನಾನು ಮೊದಲ ಸಲ ಇಲ್ಲಿಗೆ ಬರುತ್ತಿದ್ದೇನೆ.'

'ಉಂ'

'ಯಾರಲ್ಲಿ?' ಮೇಲಿನಿಂದ ಒಂದು ಧ್ವನಿ ಬಂತು, 'ಯಾರ ಜೊತೆ ಮಾತನಾಡ್ತಿದ್ದೀಯ?'

ಹೆಣ್ಣುಮಗಳು ತಕ್ಷಣ ಗಾಬರಿಗೊಳಗಾದಳು. ಅವಳು ತನ್ನ ಬಲಗೈಯಿಂದ ಅವನಿಗೆ ಹೋಗುವಂತೆ ಸನ್ನೆ ಮಾಡಿ ತರಾತುರಿಯಿಂದ ಏಣಿ ಮೆಟ್ಟಿಲುಗಳನ್ನು ಹತ್ತಿ, ಮರೆಯಾದಳು. ಅವನು ಅಸಾಧಾರಣವಾಗಿ ಮಿಡಿಯುತ್ತಿದ್ದ ಹೃದಯದಿಂದ ಮನೆಗೆ ಮರಳಿದ.

ಅಂದಿನಿಂದ ಅವನು ಸಮಯ ಸಿಕ್ಕಾಗಲೆಲ್ಲ ಆ ಮನೆಯ ಸುತ್ತಲೂ ನಡೆಯತೊಡಗಿದ. ಬೇಸಿಗೆಯ ರಜೆ ಮುಗಿದು ಪುನಃ ಕಾಲೇಜಿಗೆ ಹೋಗುವ ಮೊದಲು ಮತ್ತೊಮ್ಮೆ ಅವಳನ್ನು ನೋಡಬೇಕೆಂದು ಬಯಸಿದ. ಒಂದು ದಿನ ಅವನು ಅಪ್ಪನಿಗೆ ಹೇಳಿದ,

'ನಾನೂ ಅಪ್ಪನ ಜೊತೆ ಅಲ್ಲಿಗೆ ಬರಲೆ? ಓದಲಿಕ್ಕೇನಾದರೂ ಒಳ್ಳೆಯ ಪುಸ್ತಕ ಅಲ್ಲಿ ಸಿಗಬಹುದಾಂತ ನೋಡೋದಿಕ್ಕೆ.'

'ಅದನ್ನು ಮಾತ್ರ ಕೇಳಬೇಡ; ಅಲ್ಲಿ ಯಾರನ್ನು ಒಳಕ್ಕೆ ಬಿಡೋಲ್ಲ. ನಾನು ಮುದುಕ, ಕಣ್ಣು ಕಾಣಿಸದವನು, ಅದರಿಂದ ನನಗೆ ಈ ಕೆಲಸ ಸಿಕ್ಕಿದ್ದು. ಅವರಿಗೆ ಯಾರ ಮೇಲೂ ನಂಬಿಕೆ ಇಲ್ಲ.'

ಒಂದು ಸಂಜೆ ಅವನು ಆ ಮನೆಯ ಗೇಟಿನ ಬಳಿ ಬಂದು ನಿಂತ. ಮಹಡಿಯ ಮಲಗುವ ಕೋಣೆಗಳ ಕಿಟಕಿಗಳೆಲ್ಲವೂ ಮುಚ್ಚಿದ್ದವು. ಅವಳನ್ನು ನೋಡದಿದ್ದರೆ ತಾನು ಸತ್ತುಹೋಗುತ್ತೇನೆಂದು ಕೂಡ ಅವನಿಗೆ ತೋರಿತು. ಆಕಾಶ ಕಪ್ಪಿಟ್ಟು ಮೃದುವಾಗಿತ್ತು. ಅವನು ಗೇಟನ್ನು ತಳ್ಳಿ ತೆರೆದು ಪುಡಿಗಲ್ಲ ಹಾದಿಗೆ ಬಂದ.

'ಯಾರದು' ಒಳಗಿನಿಂದ ಪೆಡಸುಧ್ವನಿ ಮತ್ತೊಮ್ಮೆ ಮೊಳಗಿತು. ಅವನು ತಿರುಗಿ ನಡೆಯಲು ಸಿದ್ಧನಾದ. ಕಾರಣಗಳನ್ನು, ಸಬೂಬುಗಳನ್ನು ಹೇಳಲು ತನಗೆ ಧೈರ್ಯ ಸಾಲದೇ ಹೋಗಬಹುದೆಂದು ಅವನು ಭಾವಿಸಿದ. ಗೇಟಿನ ಬಳಿ ಬಂದಾಗ ಅವನು ಹಿಂತಿರುಗಿ ನೋಡಿದ. ಮೇಲಿನ ಕಿಟಕಿಗಳಲ್ಲಿ ಒಂದು ತೆರೆಯಲ್ಪಟ್ಟು ಬಂಗಾರದ ಬಣ್ಣದ ಮುಖವೊಂದು ಕಾಣಿಸಿತು. ಅವನ ಕಾಲುಗಳ ಚಲನೆ ಸ್ತಬ್ಧಗೊಂಡಿತು. ಅವಳು ಆತನನ್ನೇ ದಿಟ್ಟಿಸುತ್ತಾ ನಿಂತಿದ್ದಳು.

'ಯಾರದು ಗೇಟು ತೆರೆಯುತ್ತಿರುವುದು?' ಆ ಧ್ವನಿ ಮತ್ತೆ ಎದ್ದುಬಂತು. ಅವಳು ಅವನಿಗೆ ಹೋಗುವಂತೆ ಕೈ ಸನ್ನೆ ಮಾಡಿದಳು.

ಅದರ ನಂತರ ಅವನು ಅವಳನ್ನು ಕಂಡಿದ್ದು ಎರಡು ವರ್ಷಗಳ ನಂತರ. ಅಂದಿಗೆ ಅವನು ಓದು, ತರಬೇತಿ ಮುಗಿಸಿ ಡಾಕ್ಟರ್ ಆಗಿದ್ದ. ಪ್ರಾಕ್ಟೀಸ್ ಪ್ರಾರಂಭಿಸುವ ಮೊದಲು ಎರಡು ತಿಂಗಳು ತನ್ನ ಊರಿನಲ್ಲಿರುವ ಅಪ್ಪ ಮತ್ತು ಅಮ್ಮಂದಿರ ಜೊತೆಯಲ್ಲಿರೋಣವೆಂದು ಅವನು